# ಎತ್ತಿನಹೊಳೆ ಹರಿಯುವುದೆತ್ತ

Oct 11, 2015, 04.00 AM IST



ನಿಸರ್ಗ ದೇವತೆಯ ಶಾಪಕ್ಕೋ, ಕೋಪಕ್ಕೋ ಗುರಿಯಾಗಿ ಶಾಶ್ವತ ಬರಪೀಡಿತ ಜಿಲ್ಲೆಗಳೆಂಬ ಅಪಖ್ಯಾತಿಗೆ ಒಳಗಾಗಿರುವ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತಿತರ ಜಿಲ್ಲೆಗಳ ಲಕ್ಷಾಂತರ ಮಂದಿ ಎತ್ತಿನಹೊಳೆ ಯೋಜನೆ ಅನುಷ್ಠಾನಗೊಳ್ಳುವುದನ್ನೇ ಕಾತರದಿಂದ ಕಾಯುತ್ತಿದ್ದಾರೆ. ಈ ಯೋಜನೆ ಜಾರಿಯಾದರೆ ನಮ್ಮ ಬಾಯಾರಿಕೆ ಶಾಶ್ವತವಾಗಿ ನೀಗುತ್ತದೆ, ನಮ್ಮ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಆಸೆಗಣ್ಣಿನಿಂದ ಎದುರು ನೋಡುತ್ತಿದ್ದಾರೆ. ಆದರೆ, ಇನ್ನೊಂದೆಡೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರಾವಳಿ ಭಾಗದ ಲಕ್ಷಾಂತರ ಜನ ಈ ಯೋಜನೆಯಿಂದಾಗಿ ನಮ್ಮ ದುರ್ದಿನಗಳು ಆರಂಭವಾಗಲಿವೆ, ಕರಾವಳಿ ಪ್ರದೇಶದಲ್ಲಿ ನೀರಿನ ಬವಣೆ ಉಂಟಾಗುತ್ತದೆಂಬ ಆತಂಕದಲ್ಲಿದ್ದಾರೆ. ಹೇಗಾದರೂ ಮಾಡಿ ಈ ಯೋಜನೆಯನ್ನು ತಡೆಯಬೇಕೆಂದು ಪ್ರತಿಭಟನೆಯ ಹಾದಿ ತುಳಿದಿದ್ದಾರೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರತಿಷ್ಠೆ, ರಾಜಕೀಯ, ಭಾವನಾತ್ಮಕತೆಯನ್ನು ಬದಿಗಿಟ್ಟು ಎರಡೂ ಕಡೆಗಳಲ್ಲಿನ ಜನರ ಹಿತವನ್ನು ಮಾತ್ರ ಗಮನದಲ್ಲಿಟ್ಟುಕೊಂಡು, ವಾಸ್ತವಿಕ ಸಂಗತಿಗಳ ಆಧಾರದ ಮೇಲೆ ಒಂದೇ ರಾಜ್ಯದ ಜಿಲ್ಲೆಗಳ ಮಧ್ಯೆ ಉಂಟಾಗಿರುವ ಈ 'ಜಲವಿವಾದ'ವನ್ನು ಬಗೆಹರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಯೋಜನೆಯ ವಿರುದ್ಧವಿರುವ ಕೇಂದ್ರದ ಮಾಜಿ ಸಚಿವ ಬಿ.ಜನಾರ್ದನ್ ಪೂಜಾರಿ ಮತ್ತು ಯೋಜನೆಯ ಪರ ಇರುವ ವಿಧಾನಸಭೆಯ ಮಾಜಿ ಸ್ಪೀಕರ್, ಶಾಸಕ ಕೆ.ಆರ್.ರಮೇಶಕುಮಾರ್ ವಿಜಯ ಕರ್ನಾಟಕದ 'ಸ್ಟ್ರೇಟ್ ಫೈಟ್'ನಲ್ಲಿ ಮಾತನಾಡಿದ್ದಾರೆ.

-----

**ರಮೇಶಕುಮಾರ್ ಸಂದರ್ಶನ: ಸುಭಾಷ್ ಹೂಗಾರ**

**ದಕ್ಷಿಣ ಕನ್ನಡದ ನನ್ನ ಸಹೋದರರು ನಿಷ್ಕರುಣಿಗಳಲ್ಲ**

**ವಿಕ: ಎತ್ತಿನಹೊಳೆ ಯೋಜನೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರಿ ವಿರೋಧ ವ್ಯಕ್ತವಾಗುತ್ತಿದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?**

**ರಮೇಶಕುಮಾರ್:** ದಕ್ಷಿಣ ಕನ್ನಡ ಜಿಲ್ಲೆಯ ಜನರು ಮತ್ತು ನಾವು ಶತ್ರುಗಳಲ್ಲ. ಅಂಥ ಭಾವನೆಯನ್ನು ನಾನು ಖಂಡಿತವಾಗಿಯೂ ಇಟ್ಟುಕೊಂಡಿಲ್ಲ. ಅವರ ಪ್ರತಿಭಟನೆ ಯಾಕೆ? ಏನು ವಿಷಯ? ಅವರ ಆತಂಕಗಳೇನು? ಎಂಬುದನ್ನು ತಿಳಿದುಕೊಳ್ಳಬೇಕು ಎಂಬ ಕುತೂಹಲ ನನಗಿದೆ. ನಾವಿಬ್ಬರೂ ಅಣ್ಣ ತಮ್ಮಂದಿರು, ಒಂದೇ ರಾಜ್ಯದ ಜನ, ನಮ್ಮ ನಡುವೆ ಸ್ನೇಹ, ಪ್ರೀತಿ, ವಿಶ್ವಾಸ ಮುಖ್ಯ. ವಿಜಯ ಕರ್ನಾಟಕದ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯೂ ಸೇರಿದಂತೆ ಇಡೀ ರಾಜ್ಯದ ಜನಕ್ಕೆ ನಾನು ಒಂದು ಮಾತು ಹೇಳಲು ಬಯಸುತ್ತೇನೆ. ಎತ್ತಿನಹೊಳೆ ಯೋಜನೆಯಿಂದ ದಕ್ಷಿಣ ಕನ್ನಡದ ನನ್ನ ಸಹೋದರ-ಸಹೋದರಿಯರಿಗೆ ತೊಂದರೆ ಆಗುವುದಾದರೆ, ನಾನೂ ಅವರೊಂದಿಗೆ ಹೋರಾಟಕ್ಕೆ ನಿಲ್ಲುತ್ತೇನೆ. ಇನ್ನೊಬ್ಬರಿಗೆ ತೊಂದರೆ ಮಾಡಿ, ಇನ್ನೊಬ್ಬರಿಗೆ ಕಿರುಕುಳ ನೀಡಿ, ಇನ್ನೊಬ್ಬರ ನೀರು ಕಸಿದುಕೊಂಡು ನಾವು ಸುಖವಾಗಿರಬೇಕು ಎಂಬ ದುರಾಲೋಚನೆಯ ಜನ ನಾವಲ್ಲ. ನಮಗೆ ಕುಡಿಯಲು ನೀರಿಲ್ಲದೇ ಇದ್ದರೂ ಪರವಾಗಿಲ್ಲ, ನಮ್ಮ ಭಾಗದಲ್ಲಿ ಅಂತರ್ಜಲ ಬತ್ತಿ ಹೋಗಿದ್ದರೂ ಪರವಾಗಿಲ್ಲ, ನಾವು ಇಡೀ ಜೀವನ ಹೀಗೆಯೇ ನೀರಿಲ್ಲದೇ ಸತ್ತರೂ ಪರವಾಗಿಲ್ಲ. ಮತ್ತೊಬ್ಬರಿಗೆ ಸಮಸ್ಯೆ ಉಂಟು ಮಾಡುವದಾದರೆ ಈ ಯೋಜನೆ ನಮಗೆ ಬೇಡವೇ ಬೇಡ.

**ವಿಕ: ಹಾಗಾದರೆ, ನಿಮ್ಮ ಪ್ರಕಾರ ಈ ಯೋಜನೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಏನೂ ತೊಂದರೆ ಇಲ್ಲವೇ? ವಿನಾಕಾರಣ ಅಲ್ಲಿ ಹೋರಾಟ ನಡೆದಿದೆಯೇ?**

ರಮೇಶಕುಮಾರ್: ನನಗೆ ಗೊತ್ತಿರುವುದೇ ಸತ್ಯ ಎಂದು ನಾನು ಹೇಳುವುದಿಲ್ಲ. ನಮಗೆ ಗೊತ್ತಿರದ ಸಂಗತಿಗಳು, ಮಾಹಿತಿಗಳು ಹೋರಾಟಗಾರರ ಬಳಿ ಇರಬಹುದು. ಆ ಬಗ್ಗೆ ಅತ್ಯಂತ ಸೌಹಾರ್ದ ವಾತಾವರಣದಲ್ಲಿ ಚರ್ಚೆ ನಡೆಯಬೇಕಿದೆ. ಆದರೆ, ನಮ್ಮ ಬಳಿ ಇರುವ ಮಾಹಿತಿ, ಅಂಕಿ-ಸಂಖ್ಯೆಗಳೆಲ್ಲವೂ ಸರಕಾರಿ ಸಂಸ್ಥೆಗಳೇ ನಮಗೆ ಕೊಟ್ಟಿದ್ದು. ಈ ಯೋಜನೆಯನ್ನು ನಾವು ಯಾರೋ ಮಾಡಿದ್ದಲ್ಲ. ಕಾಲ ಕಾಲಕ್ಕೆ ರಾಜ್ಯದಲ್ಲಿ ಬಂದ ಸರಕಾರಗಳು ಬಹಳಷ್ಟು ಅಧ್ಯಯನ ಮಾಡಿ, ಎಲ್ಲವನ್ನೂ ಅಳೆದು ತೂಗಿ ಈ ಯೋಜನೆ ರೂಪಿಸಿವೆ. ಮೊದಲು ಭದ್ರಾ ಮೇಲ್ದಂಡೆ ಯೋಜನೆಯಿಂದ ನಮ್ಮ ಜಿಲ್ಲೆಗಳಿಗೆ ನೀರು ತರಲು ಯೋಚಿಸಲಾಗಿತ್ತು. ಅದು ಸಾಧ್ಯವಿಲ್ಲ ಎಂದಾದ ಮೇಲೆ 1980ರಲ್ಲಿ ಎಸ್.ಎಂ.ಕೃಷ್ಣ ಸಿಎಂ ಆಗಿದ್ದಾಗ ಈ ಯೋಜನೆಯ ಬೀಜಾಂಕುರವಾಯಿತು. ಎತ್ತಿನಹೊಳೆಯೂ ಸೇರಿದಂತೆ ನೇತ್ರಾವತಿ ನದಿಗೆ ಸೇರುವ ಆರು ಹೊಳೆಗಳಿವೆ. ಮಳೆಗಾಲದಲ್ಲಿ ಅವು ತುಂಬಿ



ಹರಿಯುತ್ತವೆ. ಈ ಪೈಕಿ ಎತ್ತಿನಹೊಳೆಯಿಂದ ಮಳೆಗಾಲದ ನಾಲ್ಕು ತಿಂಗಳು ಮಾತ್ರ ನೀರನ್ನು ತಿರುಗಿಸಿ ನಮ್ಮ ಭಾಗದ ಕೆರೆಗಳನ್ನು ಅರ್ಧದಷ್ಟು ತುಂಬಿಸಿಕೊಳ್ಳುವ ಯೋಜನೆ ರೂಪಿಸಲಾಗಿದೆ.

**ವಿಕ: ಆ ಭಾಗದಲ್ಲಿ ಬೀಳುವ ಮಳೆ ಪ್ರಮಾಣದ ಬಗ್ಗೆ ತಜ್ಞರ ನಡುವೆ ಭಿನ್ನಾಭಿಪ್ರಾಯ ಇದೆ. ಈ ಯೋಜನೆಯಿಂದ ದಕ್ಷಿಣ ಕನ್ನಡಕ್ಕೆ ಸಮಸ್ಯೆ ಗ್ಯಾರಂಟಿ ಎಂದು ಹೇಳಿದವರೂ ಇದ್ದಾರಲ್ಲವೇ?**

ರಮೇಶಕುಮಾರ್: ಡಾ.ಟಿ.ವಿ.ರಾಮಚಂದ್ರ ಎಂಬುವರೊಬ್ಬರು ಈ ರೀತಿ ಅಭಿಪ್ರಾಯ ನೀಡಿದ್ದಾರೆ. ಈ ರಾಮಚಂದ್ರ ಅವರು ಎತ್ತಿನಹೊಳೆಯವರೂ ಅಲ್ಲ, ಕುಮಾರಧಾರಾ ಭಾಗದವರೂ ಅಲ್ಲ. ಈ ಬಗ್ಗೆ ವರದಿ ಕೊಡಿ ಎಂದು ಅವರಿಗೆ ಯಾರು ಕೇಳಿದರೋ ದೇವರಿಗೇ ಗೊತ್ತು. ಆದರೂ ಸಹ ಅವರು ನೀಡಿದ ವರದಿಯಲ್ಲಿ ಸತ್ಯಾಂಶ ಇರಬಹುದೇ ಎಂದು ತಿಳಿಯಲು ಕರ್ನಾಟಕ ನೀರಾವರಿ ನಿಗಮದವರು ಅದನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಕಳುಹಿಸಿ ಅಲ್ಲಿನ ವಿಜ್ಞಾನಿಗಳಿಂದ ಅಭಿಪ್ರಾಯ ಕೇಳಿದ್ದರು. ಇದು ರಾಮಚಂದ್ರ ಅವರ ವೈಯಕ್ತಿಕ ಅಭಿಪ್ರಾಯ. ಎತ್ತಿನಹೊಳೆ ಭಾಗದಲ್ಲಿ ಆಗುವ ಮಳೆ ಪ್ರಮಾಣದ ಬಗ್ಗೆ ಈ ಹಿಂದೆ ನೀಡಿರುವ ವರದಿಗೆ ನಾವು ಬದ್ಧ ಎಂದಿದ್ದಾರೆ. ಅಷ್ಟೇ ಅಲ್ಲದೇ, ಆ ಭಾಗದಲ್ಲಿ ಮಳೆ ಮಾಪನಕ್ಕೆ ಇರುವ ಎರಡೂ ಕೇಂದ್ರಗಳು (ಕರ್ನಾಟಕ ವಿದ್ಯುತ್ ನಿಗಮ ಲಿ. ಮತ್ತು ಸೆಂಟ್ರಲ್ ವಾಟರ್ ಕಮಿಷನ್‌ನ ಕೇಂದ್ರಗಳು) ಮಳೆ ಪ್ರಮಾಣದ ಬಗ್ಗೆ ಒಂದೇ ಮಾಹಿತಿ ನೀಡಿವೆ. ಮಳೆ ಮಾಪನಕ್ಕೆ ಇರುವ ಏಕೈಕ ವಿಧಾನವಾದ 'ಯಿಂಗ್ಲಿಸ್' ಪದ್ಧತಿ ಮೂಲಕವೇ ಮಳೆಯ ಪ್ರಮಾಣ ಅಳತೆ ಮಾಡಲಾಗಿದೆ.

**ವಿಕ: ಈ ಯೋಜನೆ ಜಾರಿಯಾದರೆ ಪ್ರತ್ಯೇಕ ತುಳುನಾಡಿಗೆ ಹೋರಾಟ ಮಾಡಬೇಕಾದೀತು ಎಂದು ಜನಾರ್ದನ್ ಪೂಜಾರಿ ಎಚ್ಚರಿಕೆ ನೀಡಿದ್ದಾರೆ. ನಿಮ್ಮ ಪ್ರತಿಕ್ರಿಯೆ?**

ರಮೇಶಕುಮಾರ್: ಈ ಬಗ್ಗೆ ನನ್ನದೇನೂ ಪ್ರತಿಕ್ರಿಯೆ ಇಲ್ಲ. ಎರಡೂ ಕಡೆಯ ಜನರ ನಡುವೆ ಇನ್ನಷ್ಟು ವಿರಸ ಉಂಟು ಮಾಡುವಂಥ ಒಂದು ಪದವನ್ನೂ ನಾನು ಹೇಳೊಲ್ಲ. ನನ್ನ ಉದ್ದೇಶ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದೇ ಹೊರತು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುವುದಲ್ಲ.

**ವಿಕ: ಒಂದೇ ರಾಜ್ಯದ ಎರಡು ಭಾಗಗಳ ಜನರ ನಡುವೆ ಉಂಟಾಗಿರುವ ಈ ಜಲವಿವಾದ ಬಗೆಹರಿಸುವ ಧೈರ್ಯ, ಪ್ರಾಮಾಣಿಕತೆ, ನೈತಿಕ ಬಲ, ಮುತ್ಸದ್ಧಿತನ ಇರುವ ನಾಯಕರೇ ನಮ್ಮಲ್ಲಿ ಕಾಣುತ್ತಿಲ್ಲವಲ್ಲ.**

ರಮೇಶಕುಮಾರ್: ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ನಾಯಕತ್ವದ ದಾರಿದ್ರ್ಯ ಇದೆ. ನಾವೆಲ್ಲರೂ ಜನಪ್ರತಿನಿಧಿಗಳೇ ಹೊರತು ಜನನಾಯಕರಲ್ಲ. ನಮ್ಮಲ್ಲಿ ಜಾತಿ ನಾಯಕರಿದ್ದಾರೆ, ಪಕ್ಷದ ನಾಯಕರಿದ್ದಾರೆ, ಅವರವರ ಜಿಲ್ಲೆ, ರಾಜ್ಯ, ಊರು-ಕೇರಿಗೆ ಸೀಮಿತವಾದ ನಾಯಕರಿದ್ದಾರೆ. ಆದರೆ, ನಿಜವಾದ ಜನನಾಯಕರು ಇಲ್ಲ.

**ವಿಕ: ಕಳಂಕಿತ ಐಎಎಸ್ ಅಧಿಕಾರಿ ಕಪಿಲ್ ಮೋಹನ್ ಪಾಲುದಾರರಾಗಿರುವ ಕಂಪೆನಿ ಕಾಮಗಾರಿಯ ಗುತ್ತಿಗೆ ಪಡೆದಿದೆ, ಭಾರಿ ಅವ್ಯವಹಾರ ನಡೆದಿದೆ ಎಂದು ಜನಾರ್ದನ್ ಪೂಜಾರಿ ಆರೋಪಿಸಿದ್ದಾರೆ.**

ರಮೇಶಕುಮಾರ್: ಆ ಆರೋಪದ ಬಗ್ಗೆ ನಾನೇನು ಹೇಳಲಾರೆ. ಈ ಯೋಜನೆಯಲ್ಲಿ ಪೈಪ್‌ಲೈನ್ ಅಳವಡಿಸುತ್ತಿರುವುದು ಕೇವಲ 54 ಕಿ.ಮೀ.ಗೆ ಮಾತ್ರ. ಉಳಿದದ್ದೆಲ್ಲ ಓಪನ್ ಕೆನಾಲ್. ಜಾಗತಿಕ ಟೆಂಡರ್ ಮೂಲಕ ಆ ಕಂಪೆನಿಗೆ ಗುತ್ತಿಗೆ ನೀಡಲಾಗಿದೆ. ಆ ಕಂಪೆನಿಗೊಂದು ಇತಿಹಾಸ ಇದೆ. ಇದೇ ಸಂಸ್ಥೆ ಪಕ್ಕದ ಆಂಧ್ರ ಪ್ರದೇಶದಲ್ಲಿ ಕೃಷ್ಣಾ-ಗೋದಾವರಿ ಜೋಡಣೆ ಕೆಲಸವನ್ನು ನಿಗದಿತ ಅವಧಿಗಿಂತ ಮೊದಲೇ ಮುಗಿಸಿದೆ. ಅಲ್ಲಿನ ಸಿಎಂ ಚಂದ್ರಬಾಬು ನಾಯ್ಡು ಆನಂದಭಾಷ್ಪ ಸುರಿಸಿ ಕಂಪೆನಿಗೆ ಧನ್ಯವಾದ ಹೇಳಿದ್ದಾರೆ. ಪಕ್ಕದ ರಾಜ್ಯದಲ್ಲಿ ನದಿ ಜೋಡಣೆ ನಡೆಯುತ್ತಿವೆ. ನಾವು ಈ ಸಣ್ಣ ಯೋಜನೆಗೆ ಇಷ್ಟೊಂದು ಸಮಸ್ಯೆ ಮಾಡಿಕೊಂಡಿದ್ದೀವೆ. ಅವ್ಯವಹಾರ ನಡೆದಿದ್ದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ, ಆ ಕಪಿಲ್ ಮೋಹನ್ ನನ್ನ ನೆಂಟನೂ ಅಲ್ಲ, ಇನ್ನೇನೂ ಅಲ್ಲ. ಆತ ನಮಗೆ ಮುಖ್ಯವೇ ಅಲ್ಲ. ನಮಗೆ ನಮ್ಮ ಜನರ ನೀರಿನ ಸಮಸ್ಯೆಯಷ್ಟೇ ಮುಖ್ಯ.

**ವಿಕ: ನೀರು ಭಾವನಾತ್ಮಕ ವಿಷಯ. ಭವಿಷ್ಯದಲ್ಲಿ ನಮಗೆ ತೊಂದರೆ ಆಗಬಹುದೆಂಬ ಆತಂಕ ದಕ್ಷಿಣ ಕನ್ನಡ ಜಿಲ್ಲೆ ಜನರಲ್ಲಿ ಇರುವುದು ಸಹಜ ಅಲ್ಲವೇ?**

ರಮೇಶಕುಮಾರ್: ಆತಂಕ ಸಹಜ. ಆದರೆ, ಆತಂಕ ನಿಜವಾಗಬೇಕೆಂದಿಲ್ಲ. ದೇವರಾಜು ಅರಸು ಅವರು ಸಿಎಂ ಆಗಿದ್ದಾಗ ವರುಣಾ ನಾಲೆ ಮಾಡಿದರು. ಈ ನಾಲೆಯಿಂದ ಕೆಆರ್‌ಎಸ್ ಮುಳುಗೇ ಹೋಗುತ್ತದೆಂಬ ಆತಂಕ ಮೈಸೂರು ಭಾಗದಲ್ಲಿ ವ್ಯಕ್ತವಾಯಿತು. ಪ್ರತಿಭಟನೆಗಳು ನಡೆದವು. ಈಗೇನಾಗಿದೆ ನೀವೇ ನೋಡಿ. ನಾಲೆ ಮಾಡಿದಂಥ ದೇವರಾಜು ಅರಸು, ನಾಲೆಯ ವಿರುದ್ಧ ಹೋರಾಟ ಮಾಡಿದಂಥ ಶಂಕರೇಗೌಡರು, ಮಂಚೇಗೌಡರು ಈಗ ಬದುಕುಳಿದಿಲ್ಲ. ನಾಲೆ ವಿರುದ್ಧ ಹೋರಾಡಿದ ಮಾದೇಗೌಡರು ಇನ್ನೂ ನಮ್ಮ ನಡುವೆ ಇದ್ದಾರೆ. ವರುಣಾ ನಾಲೆಯೂ ಇದೆ. ಅದರಿಂದ ರೈತರಿಗೆ ಅನುಕೂಲವೂ ಆಗಿದೆ. ಆದರೆ, ಕೆಆರೆಸ್ಸೂ ಮುಳುಗಿಲ್ಲ, ಹಾಗೇ ಇದೆ.

**ವಿಕ: ಜನಾರ್ದನ್ ಪೂಜಾರಿ ಅವರೂ ಸೇರಿದಂತೆ ಹೋರಾಟ ನಿರತರಿಗೆ ಏನು ಹೇಳಲು ಬಯಸುತ್ತೀರಿ?**

ರಮೇಶಕುಮಾರ್: ದಕ್ಷಿಣ ಕನ್ನಡದ ನನ್ನ ಸಹೋದರರು ನಿಷ್ಕರುಣಿಗಳಲ್ಲ, ನಿರ್ದಯಿಗಳಲ್ಲ, ವಿವೇಚನೆ ರಹಿತರು ಅಲ್ಲ. ಅತ್ಯಂತ ವಿದ್ಯಾವಂತರು ಮತ್ತು ಬುದ್ಧಿವಂತರು. ಈ ಯೋಜನೆ ಬಗ್ಗೆ ಅವರ ಆತಂಕಕ್ಕೆ ಏನೋ ಕಾರಣವಿರಬಹುದು ಎಂದೇ ನನ್ನ ಅನಿಸಿಕೆ. ನೋಡಿ, ಈಗಾಗಲೇ ಮೂರು ಬಾರಿ ಡಿಪಿಆರ್ ಆಗಿದೆ, ತಾಂತ್ರಿಕ ಸಲಹಾ ಸಮಿತಿ ವರದಿ ಇದೆ, ಆಡಳಿತಾತ್ಮಕ ಒಪ್ಪಿಗೆ ದೊರೆತಿದೆ, ಹಣಕಾಸು ಇಲಾಖೆಯ ಮಂಜೂರಿಯೂ ಇದೆ. ಸಚಿವ ಸಂಪುಟದಲ್ಲಿ ಅಂಗೀಕಾರವಾಗಿದೆ, ಗ್ಲೋಬಲ್ ಟೆಂಡರ್ ಆಗಿದೆ, ಕೆಲಸವೂ ಆರಂಭವಾಗಿ ಈಗ ಮುಗಿಯುವ ಹಂತದಲ್ಲಿದೆ. ಈ ಹಂತದಲ್ಲಿ ಹೋರಾಟ ತೀವ್ರಗೊಂಡಿದ್ದು ನಮ್ಮನ್ನು ಚಿಂತೆಗೀಡು ಮಾಡಿದೆ. ಈಗಲೂ ಹೋರಾಟಗಾರರ ಆತಂಕ ನಿವಾರಣೆ ಆಗಲೇಬೇಕು. ಅದಾಗದ ಹೊರತು ಈ ಯೋಜನೆ ಜಾರಿ ಆಗಕೂಡದು ಎಂಬುದೇ ನನ್ನ ಖಚಿತ ನಿಲುವು. ನಾನು ಕಳೆದ 40 ವರ್ಷಗಳಿಂದ ಸಾರ್ವಜನಿಕ ಬದುಕಿನಲ್ಲಿದ್ದೇನೆ. ಸಾವು ಯಾವಾಗ ಬರುತ್ತದೋ ಗೊತ್ತಿಲ್ಲ. ಬದುಕಿರುವಾಗಲೇ ಈ ಫ್ಲೋರೈಡ್, ನೈಟ್ರೇಟ್, ಅರ್ಸೆನಿಕ್ ನೀರಿನ ಚಿತ್ರಹಿಂಸೆಯಿಂದ ನಮ್ಮ ಭಾಗದ ಜನ ಮುಕ್ತರಾಗುವುದನ್ನು ನೋಡಬೇಕೆಂಬ ಆಸೆ ನನಗಿದೆ. ಇದಕ್ಕಿಂತ ಹೆಚ್ಚೇನು ಹೇಳಲಿ.

**ವಿಕ: ಹೋರಾಟವಂತೂ ತೀವ್ರವಾಗಿದೆ. ನಿಮ್ಮ ಮುಂದಿನ ನಡೆ ಏನು?**

ರಮೇಶಕುಮಾರ್: ಪಕ್ಷಭೇದ ಮರೆತು ನಮ್ಮ ಭಾಗದ ಎಲ್ಲ ಜನಪ್ರತಿನಿಧಿಗಳು ಶೀಘ್ರವೇ ಮಂಗಳೂರಿಗೆ ಹೋಗುತ್ತೇವೆ. ಅಲ್ಲಿನ ಹೋರಾಟಗಾರರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳ ಜತೆ ಭೇಟಿ ಮಾಡುತ್ತೇವೆ. ಯೋಜನೆಯ ಲಾಭ-ನಷ್ಟಗಳ ಬಗ್ಗೆ ಸೌಹಾರ್ದಯುತವಾಗಿ ಚರ್ಚೆ ನಡೆಸುತ್ತೇವೆ. ನಮ್ಮ ಅಳಲನ್ನು ತೋಡಿಕೊಂಡು ಅವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸುತ್ತೇವೆ. ನಮ್ಮ ವಾದ ಸುಳ್ಳು ಎಂದು ಸಾಬೀತಾಗಿ ಈ ಯೋಜನೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ತೊಂದರೆ ಆಗುವುದೇ ನಿಜವಾದರೆ ನಮಗೆ ತೊಂದರೆ ಆದರೂ ಸರಿ, ಅವರಿಗೆ ತೊಂದರೆ ಆಗಲು ಬಿಡೋಲ್ಲ.

**

**ಬಿ.ಜನಾರ್ದನ್ ಪೂಜಾರಿ ಸಂದರ್ಶನ: ಬಿ. ರವೀಂದ್ರ ಶೆಟ್ಟಿ**
**ಮುಖ್ಯಮಂತ್ರಿಯವರೇ ಎತ್ತಿನಹೊಳೆ ಕಾಮಗಾರಿ ತಕ್ಷಣ ನಿಲ್ಲಿಸಿ**

**ವಿಕ : ಎತ್ತಿನಹೊಳೆ ಯೋಜನೆಗೆ ನಿಮ್ಮ ವಿರೋಧ ಯಾಕೆ?**

- ಯಾವುದೇ ಯೋಜನೆ ಮಾಡಿದಾಗ ಅದು ಅಂತಿಮವಾಗಿ ಜನರಿಗೆ ಪ್ರಯೋಜನವಾಗಬೇಕು. ಇದು ಬಯಲು ಸೀಮೆ, ಕರಾವಳಿ ಹೀಗೆ ಉಭಯ ಜಿಲ್ಲೆಗಳ ಜನತೆಗೆ ಪ್ರಯೋಜನವಿಲ್ಲ. ಈ ಯೋಜನೆಯೇ ದೊಡ್ಡ ಮೋಸ. ಅದಕ್ಕಾಗಿ ನನ್ನ ವಿರೋಧ.

**ವಿಕ : ಎತ್ತಿನಹೊಳೆ ಯೋಜನೆ ಇವತ್ತು ನಿನ್ನೆಯ ವಿಷಯವಲ್ಲ. ಎಲ್ಲ ಸರಕಾರಗಳು ಕಾಲ ಕಾಲಕ್ಕೆ ಯೋಜನೆಯನ್ನು ಮುಂದುವರಿಸುತ್ತಾ ಬಂದಿವೆ. ಮೂರು ಸಾರಿ ಡಿಪಿಆರ್ ಆಗಿದೆ. ಟೆಕ್ನಿಕಲ್ ಅಡ್ವೈಸರಿ ಕಮಿಟಿ ರಚನೆಯಾಗಿದೆ. ಆಡ್ಮಿನಿಸ್ಟ್ರೇಟಿವ್, ಫೈನಾನ್ಸಿಯಲ್ ಅಪ್ರೂವಲ್ ಆಗಿದೆ. 2 ಸಾರಿ ಟೆಂಡರ್ ರದ್ದಾಗಿದೆ. ಗ್ಲೋಬಲ್ ಟೆಂಡರ್ ಆಗಿ ಹಣ ಬಿಡುಗಡೆಯಾಗಿ ಕೆಲಸ ನಡೆಯುತ್ತಿದೆ. ಇಷ್ಟೆಲ್ಲ ಮುಗಿದ ಮೇಲೆ ಈಗ ವಿರೋಧದ ಧ್ವನಿ ಎದ್ದಿದ್ದು ಯಾಕೆ?**

- ಯಾವುದೇ ಯೋಜನೆಯಲ್ಲಿ ಮೋಸ ಇದ್ದರೆ ಅದನ್ನು ಬೆಳಕಿಗೆ ತರುವುದು ಜನಪ್ರತಿನಿಧಿಗಳ, ಮಾಧ್ಯಮದ ಕರ್ತವ್ಯ. ಇದರಿಂದ ಸರಕಾರದ ಖಜಾನೆಗೆ ನಷ್ಟವಾಗುತ್ತದೆ. ದೇಶದ ಚರಿತ್ರೆ ಗಮನಿಸಿದರೆ, ಎಲ್ಲ ಯೋಜನೆಗಳು ಮುಗಿದ ಬಳಿಕ ಮೋಸ ಬಯಲಿಗೆ ಬರುತ್ತವೆ. ಮಾಧ್ಯಮದಿಂದಾಗಿ ಇಲ್ಲಿ ಸ್ವಲ್ಪ ಮೊದಲೇ ಮೋಸ ಬಹಿರಂಗಗೊಂಡಿದೆ. ತಜ್ಞರಾದ ಡಾ. ರಾಮಚಂದ್ರ ಟಿ.ವಿ., ಡಾ. ವಿನಯ ಎಸ್. ಹಾಗೂ ಡಾ. ಭರತ್ ಐತಾಳ್ ಅವರು ಎತ್ತಿನಹೊಳೆ ನೀರಿನ ಲಭ್ಯತೆ ಕುರಿತು ಅಧ್ಯಯನ ಮಾಡಿ ವರದಿಯನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯಕ್ಕೆ ನೀಡಿದ್ದಾರೆ. ಇದರಲ್ಲಿ 24 ಟಿಎಂಸಿ ನೀರು ಸಿಗುವುದು ಬಿಡಿ, ಒಂದು ಟಿಎಂಸಿ ನೀರು ಕೂಡ ಸಿಗುವುದಿಲ್ಲ. ಯೋಜನೆ ಪರವಾಗಿದ್ದವರು ಯೋಜನೆಗೆ ಪೂರಕವಾಗಿ ವರದಿ, ಡಿಪಿಆರ್ ಮಾಡಿ ಸರಕಾರಕ್ಕೆ ನೀಡಿದ್ದಾರೆ. ಜನಪ್ರತಿನಿಧಿಗಳು, ಸರಕಾರದಿಂದ ಜನರಲ್ಲಿ ಗೊಂದಲ ಮೂಡಿದೆ. ಇದೀಗ ಮಾಧ್ಯಮಗಳು ಸತ್ಯ ಬಹಿರಂಗಪಡಿಸಿವೆ. ಈ ಹಿನ್ನೆಲೆಯಿಂದ ಈಗ ಎಲ್ಲರ ಧ್ವನಿ ಎದ್ದಿದೆ. ಈ ಮೋಸದ ಯೋಜನೆಗೆ ಕಾರಣ ಯಾರು ಎನ್ನುವುದು ಗೊತ್ತಾಗಲು ಸಿಐಡಿ ತನಿಖೆಯಾಗಬೇಕು. ಈ ಯೋಜನೆಗೆ 2012ರ ಜುಲೈ 13 ರಂದು 2323.5 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಅದೇ ವರ್ಷ ನವೆಂಬರ್‌ನಲ್ಲಿ 3269.5 ಕೋಟಿ ರೂ.ಗಳಿಗೆ ಮೊದಲ ಟೆಂಡರ್ ಕರೆಯಲಾಯಿತು. ನಾನಾ ಕಾರಣಕ್ಕೆ ಟೆಂಡರ್ ರದ್ದಾಯಿತು. ಬಳಿಕ 12,912 ಕೋಟಿ ರೂ.ಗಳಿಗೆ ಡಿಪಿಆರ್ ಮಾಡಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಯಿತು. ಇಲ್ಲಿ ನಡೆದ ಟೆಂ ಡರ್ ಪ್ರಕ್ರಿಯೆಗಳು ಪಾರದರ್ಶಕವಾಗಿ ನಡೆದಿಲ್ಲ. ಬಹಿರಂಗ ಮಾಹಿತಿ ನೀಡದೆ ಗೌಪ್ಯತೆ ಕಾಪಾಡಲಾಯಿತು ಯಾಕೆ?

**ವಿಕ : 400 ಟಿಎಂಸಿ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತದೆ. ಮಳೆಗಾಲದಲ್ಲಿ 24 ಟಿಎಂಸಿ ನೀರು ಸಿಗುತ್ತದೆ ಎಂದು ಸರಕಾರ ಮತ್ತು ಅಧಿಕೃತ ವೈಜ್ಞಾನಿಕ ಸಮೀಕ್ಷೆ ಹೇಳಿದೆ. ಆದರೆ, ನೀವು ಒಂದು ಟಿಎಂಸಿ ಕೂಡಾ ನೀರು ಸಿಗದು ಎನ್ನುತ್ತೀರಿ. ಜನರು ಯಾರನ್ನು ನಂಬಬೇಕು?**

- ಜನರು ಸತ್ಯವನ್ನು ಮಾತ್ರ ನಂಬಬೇಕು. ಸಮುದ್ರಕ್ಕೆ ಸೇರುವ ನೀರನ್ನು ಅಳತೆ ಮಾಡಿದವರು ಯಾರು? ಬಂಟ್ವಾಳದಲ್ಲಿ ನೀರಿನ ಲಭ್ಯತೆ ಕುರಿತು ಅಳತೆ ಮಾಡಿ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಸಮುದ್ರಕ್ಕೆ ಮಳೆಯ ಹೊಸ ನೀರು ಹೋಗಬೇಕು. ಇದು ಪ್ರಕೃತಿ ನಿಯಮ. ಈ ಹೊಸ ನೀರಿನಲ್ಲಿ ಒಳನಾಡಿನ ಆಹಾರ ಪದಾರ್ಥಗಳು ಹರಿದು ಬಂದು ಸಮುದ್ರದಲ್ಲಿರುವ ಮೀನುಗಳಿಗೆ ಆಹಾರ ಒದಗಿಸುತ್ತದೆ. ಹೊಸ ನೀರು ಬಾರದಿದ್ದರೆ ಮೀನುಗಾರಿಕೆಗೆ, ಮೀನು ತಿನ್ನುವವರಿಗೆ, ವಿದೇಶಿ ವಿನಿಮಯಕ್ಕೆ ಹೀಗೆ ನಾನಾ ನಷ್ಟಗಳಾಗುತ್ತವೆ. ಮಳೆ ನೀರು ಸಮುದ್ರ ಸೇರದಿದ್ದರೆ, ಸಮುದ್ರದ ನೀರು ಒಳ ಪ್ರದೇಶಕ್ಕೆ ಹರಿದು ಸಮುದ್ರ ವಿಸ್ತಾರಗೊಳ್ಳುತ್ತದೆ. ಕೇರಳದಲ್ಲಿ ನದಿಗಳನ್ನು ತಿರುಗಿಸಿ, ಸ್ಥಳೀಯವಾಗಿ ನೀರಿನ ಸಮಸ್ಯೆ ಉಂಟಾಗಿದ್ದು, ನಮ್ಮ ಕಣ್ಣ ಮುಂದಿದೆ. ಅಮೆರಿಕ ದೇಶದಲ್ಲಿಯೇ ಕಟ್ಟಿದ ಅಣೆಕಟ್ಟುಗಳನ್ನು ಒಡೆದು ಹಾಕಿದ ಉದಾಹರಣೆಗಳಿವೆ. ಇಲ್ಲಿ ಸಮುದ್ರಕ್ಕೆ ನೀರು ಹೋಗದಿದ್ದರೆ, ನಾಳೆ ಉಡುಪಿ ಮಠ, ಕುದ್ರೋಳಿ ದೇವಸ್ಥಾನ, ಉಳ್ಳಾಲ ದರ್ಗಾ ಯಾವುದೂ ಇರಲಿಕ್ಕಿಲ್ಲ.

**ವಿಕ : ಕರ್ನಾಟಕ ನೀರಾವರಿ ನಿಗಮ, ಕೆಪಿಸಿಎಲ್, ಸೆಂಟ್ರಲ್ ವಾಟರ್ ಕಮೀಷನ್ ಮಾಡಿರುವ ಮಳೆ ಮಾಪನದ ಬಗ್ಗೆ ನಿಮ್ಮ ಆಕ್ಷೇಪವಿದೆ. ಹಾಗಿದ್ದರೆ ತಾಂತ್ರಿಕ ತಜ್ಞರ ಮಾಹಿತಿಯನ್ನು ನಂಬಬಾರದೇ?**

- ಸರಕಾರ, ಜನಪ್ರತಿನಿಧಿಗಳ ಒತ್ತಡದ ಮೇರೆಗೆ ಯೋಜನೆ ಪರವಾಗಿ ನೀಡುವ ವರದಿಗಳ ಬಗ್ಗೆ ನನಗೆ ನಂಬಿಕೆ ಇಲ್ಲ. ಯಾರ್‍ಯಾರು ಒತ್ತಡ ಹಾಕಿದ್ದಾರೆ ಎಂಬುವುದು ತನಿಖೆಯಿಂದ ಬಹಿರಂಗಗೊಳ್ಳಬೇಕು.

**ವಿಕ: ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ರಾಜ್ಯದಲ್ಲೇ ಅತ್ಯಂತ ಬರಪೀಡಿತ ಪ್ರದೇಶಗಳು. ಇಲ್ಲಿ 1400 ಅಡಿ ತೋಡಿದರೂ ನೀರು ಸಿಗುತ್ತಿಲ್ಲ. ಸಿಗುವ ನೀರು ಕೂಡಾ ಫ್ಲೋರೈಡ್, ಅರ್ಸೆನಿಕ್, ನೈಟ್ರೇಟ್‌ನ ಅಂಶಗಳಿವೆ. ಅಲ್ಲಿನ ಜನ ಬದುಕಲು ಕಷ್ಟಪಡುತ್ತಿದ್ದಾರೆ. ಅವರ್‍ಯಾರೂ ಹೊರ ರಾಜ್ಯದವರಲ್ಲ, ಅನ್ಯರಲ್ಲ. ನಮ್ಮವರೇ ಅಲ್ವೇ? ಮಾನವೀಯ ನೆಲೆಯಲ್ಲಿ ಸ್ವಲ್ಪ ಯಾಕೆ ಯೋಚನೆ ಮಾಡಬಾರದು?**

- ಬಯಲು ಸೀಮೆಯ ಜನತೆಗೆ ಈ ಯೋಜನೆಯ ಬಗ್ಗೆ ಸತ್ಯ ಹೇಳದಿದ್ದರೆ, ಅಲ್ಲಿಯ ಜನರಿಗೆ ನಾನು ಪಾಪಿಯಾಗುತ್ತೇನೆ. ಅವರ ನೋವಿನ ಅರಿವು ನನಗಿದೆ. ಅವರು ನಮ್ಮ ಸಹೋದರ- ಸಹೋದರಿಯರು. ಯೋಜನೆಯಿಂದ ಅವರಿಗೆ ಪ್ರಯೋಜನ ಇಲ್ಲ ಎಂಬ ವಿಷಯವನ್ನು ಅಲ್ಲಿನ ಜನರ ಒಳಿತಿಗಾಗಿ ನಾನು ಹೇಳುತ್ತಿದ್ದೇನೆ. ಕರಾವಳಿ ನನಗೆ ಜನ್ಮ ನೀಡಿದ ನಾಡು. ಇಲ್ಲಿನ ಜನತೆಗೂ ನಿಜಾಂಶ ತಿಳಿಸುವುದು ನನ್ನ ಕರ್ತವ್ಯ ಮತ್ತು ಧರ್ಮ.

**ವಿಕ : ಡೀವಿ, ಮೊಯ್ಲಿ ಬರೀ ರಾಜಕೀಯ ಮಾಡ್ತಾರೆ. ಅವರು ಜಿಲ್ಲೆಯ ಹಿತಾಸಕ್ತಿ ಬಲಿ ಕೊಡುತ್ತಿದ್ದಾರೆ ಅಂತ ನಿಜಕ್ಕೂ ನಿಮಗೆ ಅನಿಸುತ್ತಿದೆಯಾ? ನೀರಿನ ಅವಶ್ಯಕತೆ ಹಿನ್ನೆಲೆಯಲ್ಲಿ ಎಲ್ಲರಿಗೂ ಅನ್ವಯವಾಗುವ ಒಂದು ಸೂತ್ರವನ್ನು ಮಾಡಬಾರದೆ?**

- ಅವರಿಗೆ ರಾಜಕೀಯ ಹಿತಾಸಕ್ತಿ ಇರಲೂ ಬಹುದು. ಈ ಯೋಜನೆಯ ವಿಷಯದಲ್ಲಿ ಯಾರೂ ಕೂಡ ಮೋಸ, ನಾಟಕ ಮಾಡುವುದು ಬೇಡ. ಎಲ್ಲ ಪಕ್ಷದ ಮುಖಂಡರು, ಮುಖ್ಯಮಂತ್ರಿ, ರಾಜ್ಯದಲ್ಲಿರುವ ಕೇಂದ್ರ ಮಂತ್ರಿಗಳು, ಪ್ರಧಾನ ಮಂತ್ರಿ ಸಮೇತ ಇಚ್ಛಾಶಕ್ತಿ ಪ್ರದರ್ಶಿಸಿ ನೀರಿನ ಸಮಸ್ಯೆ ಬಗೆಹರಿಸಬೇಕು. ಈ ಸಂಬಂಧ ನಾನು ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಿ ವಿವರಿಸಿದ್ದೇನೆ. ಅವರು ರಾಜ್ಯದ ಮುಖ್ಯಮಂತ್ರಿ ಹಾಗೂ ನೀರಾವರಿ ಸಚಿವರು ನನ್ನನ್ನು ಸಂಪರ್ಕಿಸಿ ಮಾತುಕತೆ ನಡೆಸುವಂತೆ ಸೂಚಿಸಿದ್ದಾರೆ. ಆದರೆ ಇದುವರೆಗೆ ಇವರಿಬ್ಬರೂ ನನ್ನನ್ನು ಸಂಪರ್ಕಿಸಿಲ್ಲ.

ಬಿಜೆಪಿಯವರು ವೋಟ್‌ಗಾಗಿ ಮಂಗಳೂರಿನಲ್ಲಿ ಜಾಥಾ ಮಾಡುವ ಬದಲು ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಿ. ಮಾಜಿ ಪ್ರಧಾನಿ ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಏನು ಮಾಡುತ್ತಿದ್ದಾರೆ. ಯೋಜನೆ ಹಾಸನ ಜಿಲ್ಲೆಯಲ್ಲಿ ಅನುಷ್ಠಾನವಾಗುತ್ತಿದೆ. ಆ ಪ್ರದೇಶದವರಿಗೂ ತೊಂದರೆ ಯಾಗುತ್ತದೆ. ಅಲ್ಲಿಯ ಜನರ ಮತ ಪಡೆದ ಮಾಜಿ ಪ್ರಧಾನಿ ದೇವೇ ಗೌಡರು ಯಾಕೆ ಸುಮ್ಮನಿದ್ದಾರೆ. ಗೌಡ್ರೆ ಎಲ್ಲಿ ಹೋಗಿದೆ ನಿಮ್ಮ ಸ್ವರ?

**ವಿಕ : ಕನ್‌ಸ್ಟ್ರಕ್ಷನ್ ಕಂಪನಿ ಮೇಲೆ ಆರೋಪ ಮಾಡ್ತಾ ಇದ್ದೀರಿ. ಕಪಿಲ್ ಮೋಹನ್‌ಗೆ ಸೇರಿದ್ದು ಅಂದಿದ್ದೀರಿ. ಇದರ ಬಗ್ಗೆ ಏನಾದರೂ ದಾಖಲೆ ಇದೆಯಾ?**

- ಇದರ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಬಂದಿವೆ. ನನ್ನಲ್ಲಿ ದಾಖಲೆಗಳು ಇಲ್ಲ. ಆದರೆ, ಸಮಗ್ರ ಸಿಐಡಿ ತನಿಖೆಯಾಗಲಿ. ಎಲ್ಲವೂ ಬಹಿರಂಗವಾಗಬಹುದು.

**ವಿಕ : ಮುಖ್ಯಮಂತ್ರಿಗಳು, ಚಿಕ್ಕಬಳ್ಳಾಪುರ, ಕೋಲಾರದ ಜನರಿಗೆ ನೀವು ಏನು ಹೇಳಲು ಬಯಸುತ್ತೀರಿ? ಎಲ್ಲರೂ ಕುಳಿತುಕೊಂಡು ಮಾತುಕತೆಗೆ ಸಿದ್ಧರಿದ್ದೀರಾ?**

- ಮುಖ್ಯಮಂತ್ರಿಗಳೇ ಎತ್ತಿಹೊಳೆ ಯೋಜನೆ ಕಾಮಗಾರಿ ತಕ್ಷಣ ನಿಲ್ಲಿಸಿ. ಬಯಲು ಸೀಮೆ ಜನರಿಗೆ ಯೋಜನೆ ಅರ್ಥವಾಗುತ್ತಿದೆ. ಅಲ್ಲಿನ ಜನರು, ವಿದ್ಯಾರ್ಥಿಗಳೇ ಯೋಜನೆಯ ವಿರುದ್ಧ ಪ್ರತಿಭಟನೆ ಆರಂಭಿಸಿದ್ದಾರೆ. ಅವರು ವಾಸ್ತವ ವಿಷಯ ತಿಳಿದುಕೊಳ್ಳಬೇಕು. ಸಮಸ್ಯೆ ಪರಿಹಾರಕ್ಕೆ ಯಾವುದೇ ಮಾತುಕತೆಗೆ ನಾನು ಬದ್ಧನಾಗಿದ್ದೇನೆ.

**ವಿಕ : ಇದು ಎತ್ತಿನಹೊಳೆಗಿಂತಲೂ ಮೊಯ್ಲಿ-ಪೂಜಾರಿ ಕದನ ಎಂಬಂತಾಗಿದೆ. ರಾಜಕೀಯ ಮೀರಿ ನಿಲ್ಲಲು ಸಾಧ್ಯವಿಲ್ಲವೇ?**

- ಇದು ಕಪೋಲಕಲ್ಪಿತ. ಇದು ಪೂಜಾರಿ-ಮೊಯ್ಲಿ ಕದನ ಅಲ್ಲ. ಇದು ಜನರ ಕದನ. ಇಲ್ಲಿ ಮುಖ್ಯಮಂತ್ರಿ, ಪ್ರಧಾನ ಮಂತ್ರಿ, ಎಲ್ಲಾ ಮಂತ್ರಿಗಳು, ಜನಪ್ರತಿನಿಧಿಗಳ ವಿರುದ್ಧ ಜನರ ಹೋರಾಟ. ನನಗೆ ಮತ್ತು ವೀರಪ್ಪ ಮೊಯ್ಲಿ ಅವರಿಗೆ ದ್ವೇಷ ಇಲ್ಲ. ಮೊಯ್ಲಿಯವರು ತನ್ನ ಮಗನನ್ನು ನನ್ನ ಎದುರು ಆಂತರಿಕ ಚುನಾವಣೆಗೆ ನಿಲ್ಲಿಸಿದ್ದರು. ಆಗ ಕೂಡ ನಾನು ವಿರೋಧ ವ್ಯಕ್ತಪಡಿಸಿಲ್ಲ. ಅವರ ವಿರುದ್ಧ ನಾನು ಹೇಳಿಕೆ ಕೂಡ ಕೊಡುವುದಿಲ್ಲ. ಆದರೆ ಈ ಯೋಜನೆಯಲ್ಲಿ ಯಾವುದೇ ರಾಜಕೀಯ ಇಲ್ಲ. ಇದು ರಾಜಕೀಯ ಮೀರಿದ ವಿಷಯ.

**ಮೊಬೈಲ್ ಆ್ಯಪ್** ಡೌನ್‌ಲೋಡ್ **ಮಾಡಿಕೊಳ್ಳಿ ಮತ್ತು ತಾಜಾ ಅಪ್‌ಡೇಟ್ಸ್ ಪಡೆಯುತ್ತಾ ಇರಿ**

**ಪ್ರತಿಯೊಂದು ತಾಜಾ ಸುದ್ದಿ ತಿಳಿದುಕೊಳ್ಳಲು** ವಿಕ ಫೇಸ್ಬುಕ್ ಪುಟವನ್ನು ಲೈಕ್ ಮಾಡಿ.

Sponsored

FROM AROUND THE WEB



Say goodbye to the old ways of doing SIPs.

Zipsip




OYO Rooms provides the best stay experiences.

OYO Rooms




Win iPhone6, LED TV & more when you test drive & buy new e20

Mahindra Reva

FROM VIJAYA KARNATAKA



ಜಗತ್ತಿನ ಅತಿ ಎತ್ತರದ ದುರ್ಗಾ ಮೂರ್ತಿ ಆರಾಧನೆ!



ಡಿ ಕೆ ರವಿ ಹತ್ಯೆಯಾಗಿಲ್ಲ , ಆತ್ಮಹತ್ಯೆ



ನಿತೀಶ್ ಗೆದ್ದರೆ 'ಅಪಹರಣ' ಉದ್ಯಮ: ಮೋದಿ

Recommended By Colombia

**Tasty,Classy Menu Daily**
Appetizers, Mains, Salads,Desserts. Veg/Non-Veg, Delivery in 45 Mins
freshmenu.com

**BHEL Openings August'15**
Exp: 3 to 10 Yrs, Sal: 7L to 25L PA Apply Now & Get Multiple Interviews
timesjobs.com/BHEL-Hiring-Urgent

Ads by Google

**Photo**

